# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 708 |
| ಉತ್ತರಿಸಬೇಕಾದ ದಿನಾಂಕ | 12.03.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗದಗ-ಬೆಟಗೇರಿ ನಗರದ ಗಂಗಿಮಡಿ ಭಾಗದಲ್ಲಿ ಪ್ರಧಾನ ಮಂತ್ರಿ ಆವಾಸ ಯೋಜನೆ ಅಡಿ ಎಷ್ಟು ಮನೆ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ: ಈ ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ಹಣಕಾಸಿನ ಪಾಲು ಎಷ್ಟು ಇದೆ;</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆಯ AHP ಘಟಕದಡಿ ಗದಗ ಜಿಲ್ಲೆಯ ಗದಗ-ಬೆಟಗೇರಿ ನಗರದ ಗಂಗಿಮಡಿ ಪ್ರದೇಶದಲ್ಲಿ ಒಟ್ಟು 3859 ಮನೆಗಳನ್ನು ನಿರ್ಮಿಸಲು ಉದ್ದೇಶಿಸಿ ಗದಗ-ಬೆಟಗೇರಿ ನಗರ ಸಭೆಯಿಂದ ಸಲ್ಲಿಸಿದ್ದ ಎರಡು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಈ ಕೆಳಗಿನಂತೆ ಅನುಮೋದನೆ ಪಡೆಯಲಾಗಿದೆ.<br><br>(ರೂ. ಕೋಟಿಗಳಲ್ಲಿ)<br><table><tr><th>ಕ್ರ. ಸಂ</th><th>ಮನೆಗಳ ಸಂಖ್ಯೆ</th><th>ಕೇಂದ್ರದ ಪಾಲು</th><th>ರಾಜ್ಯದ ಪಾಲು</th></tr><tr><td>1</td><td>3630</td><td>54.45</td><td>49.43</td></tr><tr><td>2</td><td>229</td><td>3.43</td><td>4.12</td></tr><tr><td>ಒಟ್ಟು</td><td>3859</td><td>57.88</td><td>53.55</td></tr></table><br>ಮೇಲಿನ ಎರಡು ಯೋಜನೆಗಳ ಪೈಕಿ 229 Row houses ಮಾದರಿಯಲ್ಲಿ ನಿರ್ಮಿಸುವ ಮನೆಗಳು ಈಗಾಗಲೇ ಪೂರ್ಣಗೊಂಡಿದ್ದು, ನಗರ ಸಭೆ ವತಿಯಿಂದ ಈ 229 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.</td></tr>
<tr><td>ಆ)</td><td>ಗುಂಪು ಮನೆ ನಿರ್ಮಾಣ ಯೋಜನೆ ಯಾವ ವರ್ಷ ಪ್ರಾರಂಭಿಸಲಾಗಿದೆ ಹಾಗೂ ಪೂರ್ಣಗೊಳಿಸಲು ನಿಗದಿಪಡಿಸಿದ ವರ್ಷ ಯಾವುದು; ಈ ಯೋಜನೆ ಅಡಿ ಪೂರ್ಣಗೊಂಡಿರುವ ಮನೆಗಳೆಷ್ಟು ಹಾಗೂ ಅದರಲ್ಲಿ ಹಂಚಿಕೆ ಮಾಡಿದ ಮನೆಗಳೆಷ್ಟು;</td><td>ಗಂಗಿಮಡಿ ಪ್ರದೇಶದಲ್ಲಿ 3630 ಗುಂಪು ಮನೆ ನಿರ್ಮಾಣ ಯೋಜನೆಗೆ ಗದಗ-ಬೆಟಗೇರಿ ನಗರ ಸಭೆಯಿಂದಲೇ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರಿಂದ 2018 ರಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ಹಾಗೂ ಗುತ್ತಿಗೆದಾರರಿಗೆ ಕಾರ್ಯದೇಶ ನೀಡಿದ ದಿನಾಂಕ: 27.03.2018 ರಿಂದ ಮುಂದಿನ 24 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಲಾಗಿರುತ್ತದೆ.<br><br>ಈ ಯೋಜನೆಯ 3630 ಮನೆಗಳ ಪೈಕಿ 248 ಮನೆಗಳು ಪೂರ್ಣಗೊಂಡಿದ್ದು, ಇವುಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಆದರೆ, ಫಲಾನುಭವಿಗಳಿಂದ ವಂತಿಕೆ ಮೊತ್ತ ವಸೂಲಾಗಿರುವುದಿಲ್ಲ.</td></tr>
</table>

<table>
<tr>
<td>ಇ)</td>
<td>ಈ ಗುಂಪು ಮನೆ ನಿರ್ಮಾಣ ಯೋಜನೆ ಕಾರ್ಯ ವಿಳಂಬವಾಗಿದೆ ಎಂದು ಆಪಾದನೆ ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ವಿಳಂಬವಾಗಲು ಕಾರಣವೇನು? (ವಿವರಣೆ ನೀಡುವುದು)</td>
<td>3630 ಮನೆಗಳ ನಿರ್ಮಾಣ ಯೋಜನೆಯ ವಿವರ ಕೆಳಕಂಡಂತಿದೆ.<br>ರೂ. ಕೋಟಿಗಳಲ್ಲಿ
<table>
<tr><th>ಮನೆಗಳ ಸಂಖ್ಯೆ</th><th>ಯೋಜನಾ ಮೊತ್ತ</th><th>ಕೇಂದ್ರದ ಪಾಲು</th><th>ರಾಜ್ಯದ ಪಾಲು</th><th>ಫಲಾನುಭವಿಯ ಪಾಲು</th><th>ನಗರ ಸ್ಥಳೀಯ ಸಂಸ್ಥೆಯ ಪಾಲು</th></tr>
<tr><td>3630</td><td>243.97</td><td>54.45</td><td>49.43</td><td>127.83</td><td>12.26</td></tr>
</table>
ಗುಂಪು ಮನೆಗಳನ್ನು ನಿರ್ಮಾಣ ಮಾಡುವ ಯೋಜನೆಗಳಡಿ ಮನೆಗಳ ಕಾಮಗಾರಿಯನ್ನು ಮೇಲೆ ತಿಳಿಸಿರುವಂತೆ ಸರ್ಕಾರದ ಸಹಾಯಧನ ಮತ್ತು ಫಲಾನುಭವಿಗಳ ವಂತಿಕೆಯೊಂದಿಗೆ ಪೂರ್ಣಗೊಳಿಸಬೇಕಾಗಿದ್ದು, ಫಲಾನುಭವಿಗಳು ವಂತಿಕೆ ಮೊತ್ತವನ್ನು ಪಾವತಿಸಲು ಮುಂದೆ ಬಾರದೆ ಇರುವುದು ಯೋಜನೆಯ ವಿಳಂಬಕ್ಕೆ ಕಾರಣವಾಗಿರುತ್ತದೆ.<br><br>ಮುಂದುವರೆದು ಫಲಾನುಭವಿಗಳಿಗೆ ಬ್ಯಾಂಕ್ ಸಾಲ ಒದಗಿಸುವ ಉದ್ದೇಶದಿಂದ ನಗರಸಭೆ ವತಿಯಿಂದ ಬ್ಯಾಂಕ್ ಮತ್ತು NBFC ಗಳಿಗೆ ಫಲಾನುಭವಿಗಳ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ.</td>
</tr>
<tr>
<td>ಈ)</td>
<td>ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ ಗುಂಪುಮನೆ ನಿರ್ಮಾಣ ಹಾಗೂ ಹಂಚಿಕೆ ಕಾರ್ಯ ಯಾವಾಗ ಪೂರ್ಣಗೊಳಿಸಲಾಗುವುದು?</td>
<td>ಈ ಯೋಜನೆಯ ಗುತ್ತಿಗೆದಾರರು Arbitration Case No:437/2024 ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣ ಇತ್ಯರ್ಥಗೊಂಡ ನಂತರ ಉಳಿದ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.</td>
</tr>
</table>

ಸಂಖ್ಯೆ: ವಇ 52 ಹೆಚ್‌ಎಫ್‌ಎ 2025]

(ಬಿ.ಝಡ್ ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.